ನಂಬರ್.	ಪ್ಲಾಂಟೇಷ್ಣಗಳ ಹೆಸರು.	ತಾಲ್ಲೂಕು.	ಷರಾ.
51	ಮಲ್ಲತ್ತಹಳ್ಳಿ ..	ಬೆಂಗಳೂರು	
52	ಕೆಂಚನಹಳ್ಳಿ ..	ಡಿಟೋ	
53	ಮಾವಿನಕೊಮ್ಮನಹಳ್ಳಿ ..	ನೆಲಮಂಗಲ	
54	ತುರುವನಹಳ್ಳಿ ..	ಕಡೂರು	
55	ವಪ್ಪಹುಣಸೆ ..	ಡಿಟೋ	
56	ಕುರುಬರಹಳ್ಳಿ ..	ಡಿಟೋ	
57	ಮಲ್ಲೇಶ್ವರ ..	ಡಿಟೋ	
58	ಕಡೂರಹಳ್ಳಿ ..	ಡಿಟೋ	
59	ಮೆಲಾಪುರ .	ತಿಪಟೂರು	
60	ಗೂಲುಕೆರೆ ..	ಬೆಂಗಳೂರು	

ಜಿ. ಈ. ರಿಕ್ಕೆಟ್ಸ್,
ಇಂಚಾರ್ಜ್ ಆಫ್ ಪ್ಲಾಂಟೇಷ್ಣ ಅಸಿಸ್ಟೆಂಟ್ ಕಮಿಸರವೇಟರ್.

ಬೆಂಗಳೂರು ಡಿಸ್ಟ್ರಿಕ್ಟ್.
ಇಸ್ತಿಹಾರ್‌ನಾಮೆ.
ತಾರೀಖು 23ನೇ ಜನವರಿ 1895.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ವೈನರ್ ಫಾರೆಸ್ಟ್ಯಯಾನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ್ ಮಾಡಲ್ಪಟ್ಟಿರುವ 1892ನೇ ಇಸವಿ ಜೂ 2ನೇ ಮರಳುಂ ಮೈಸೂರ ಗೆಜೆಟ್ಟಿನ 2ನೇ ಭಾಗದಲ್ಲಿ ಪ್ರಾಯಿಷ್ಠಾಗಿರುವ ಅದೇ ಇಸವಿ ಮೇ 11ನೇ ಮರ್ಕುಂ ಇಸ್ತಿಹಾರನ್ನು ಬದಲಾಯಿಸಿ ಅಮಲ್‌ದಾರ್ ಮತ್ತು ಸವಾಲ್‌ದಾರ್‌ಗಳ ನಡವಳಿಕೆ ಬಗ್ಯೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತಿಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್‌ದಾರ್ರು ತಪ್ಪದೆ ತಾವೇನೇ ಆಯಾಯ ಹೋಬಳಿ ಕಸಬೆಯಲ್ಲಿ ಆಯಾಯ ಹೋಬಳಿ ಫಸಲನ್ನು ಹರಾಜು ಮಾಡುವರು. ಕಾರ್ತಿಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖಿ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್‌ದಾರ್ರು ಪ್ರಕಟಿಸುತ್ತಾರೆ.

(3) ಹರಾಜು ಪರತ್ತುಗಳೇನಂದರೆ.

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ ಮಾಡುವದಿಲ್ಲ.

(b) ಆಖೈರ್ ಜಡಸವಾಲ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯ ಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೊ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಜಡಸವಾಲ್‌ದಾರನು ಹರಾಜು ಕಾಲಬಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಮತ್ತು ರೂಪಾಯಿ 1ಕ್ಕೆ ಬಂದಾಣಿ ಮೇರಿಗೆ ಆಗುವ ಲೋಕಲ್ ಸಸ್ಸನ್ನು ಸಹ ಹರಾಜು ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟನ್ನ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್‌ದಾರನನ್ನ ಗುರುಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್‌ದಾರನು ವೈಶಾಖಿ ಫಸಲನ್ನು ಜೂ 1ನೇ ತಾರೀಖು ಲಾಗಾಯತು ಡಿಸೆಂಬರ್ 31ರ ವರಿಗೂ, ಕಾರ್ತಿಕ ಫಸಲನ್ನು ಜನವರಿ 1ನೇ ತಾರೀಖು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ಎ. ನರಸಿಂಹಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಫಾರೆಸ್ಟ್ ಇಲಾಖೆ.
ಇಸ್ತಿಹಾರ್‌ನಾಮಾ.
ತಾರೀಖು 1ನೇ ಜನವರಿ 1895.

ಸ್ಯ 1890ನೆ ಫಿಬ್ರವರಿ 1ನೇ ತಾರೀಖಿನ ಮೈಸೂರು ಗೆಜೆಟ್ 2ನೆ ಪಾರ್ಟ್ 26ನೇ ಪುಟದಲ್ಲಿ ಪ್ರಾಯಿಷ್ ಆಗಿರುವ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರ 221—90ನೆ ಮರ್ಕುಮಿನ ನೋಟಿಫಿಕೇಷ್ಣ ಅನುಸರಿಸಿ ಯಾಲ್ಲರಿಗೂ ತಿಳಿಸುವದೇನಂದರೆ, ಈ ಕೆಳಗೆ ಕಂಡ ಬೆಂಗಳೂರು ಡಿಸ್ಟ್ರಿಕ್ಟಿನ ಫಾರೆಸ್ಟ್ಟುಗಳು ಮತ್ತು ಪ್ಲಾಂಟೇಷ್ಣಗಳನ್ನು ಬೇಸಿಗೆ ಕಾಲಕ್ಕೋಸ್ಕರ ಸ್ಯ 1895ನೆ ಫಿಬ್ರವರಿ ಗುರ್ರು ಲಾಗಾಯತು ಮೇ 31ನೆ ತಾರೀಖು ವರಿಗೂ ಬಂದ್ ಮಾಡಲ್ಪಟ್ಟು ಇವೆ. ಇವುಗಳಲ್ಲಿ ಕಾಲಿ ವಗ್ಯೆರೆ ಬಗ್ಯೆ ಯಾರೂ ಪ್ರವೇಶಿಸಕೂಡದು. ಅತಿಕ್ರಮಪ್ರವೇಶ ಮಾಡಿದವರನ್ನ ಪ್ರಾಸಿಕ್ಯೂಷ್ಣ ನಡಿಸುತ್ತೆ.

ನಂಬರು.	ಫಾರೆಸ್ಟ್ ಮತ್ತು ಪ್ಲಾಂಟೇಷ್ಣಗಳ ಹೆಸರುಗಳು.	ತಾಲ್ಲೂಕು.
1	ರಾಗಿಹಳ್ಳಿ ಸ್ಟೇಟ್ ಫಾರೆಸ್ಟ್	ಆನೇಕಲ್ಲು
2	ಬಿಳಿಕಲ್ ಡಿಟೋ	ಕಾನಕಾನಹಳ್ಳಿ
3	ಬಲ್ಲಂದಾಡಿ ಮತ್ತು ಮುಗ್ಗೂರು ಡಿಟೋ	ಡಿಟೋ
4	ಕಬ್ಬಾಳು ಡಿಟೋ	ಡಿಟೋ
5	ಬಸವನಬೆಟ್ಟ ಡಿಟೋ	ಮಳವಳ್ಳಿ
6	ತೆಂಗಿನಕಲ್ಲು ಮತ್ತು ಬಾಣಂತಿವಾರಿ	ಕೊಣನೂರೆ ಮತ್ತು ಕಾನಕಾನಹಳ್ಳಿ
7	ಮುದಿಗೆರೆ ಪ್ಲಾಂಟೇಷ್ಣ	ಚನ್ನಪಟ್ಟಣ
8	ಯಂಗಯ್ಯನಕೆರೆ ಪ್ಲಾಂಟೇಷ್ಣ	ಡಿಟೋ
9	ಮಾಕಳಿ ಸ್ಟೇಟ್ ಫಾರೆಸ್ಟ್	ಕೊಣನೂರೆ
10	ಚಿಕ್ಕಮಣ್ಣಗುಡ್ಡೆ ಡಿಟೋ	ಡಿಟೋ
11	ದೊಡ್ಡಮಣ್ಣಗುಡ್ಡೆ ಡಿಟೋ	ಡಿಟೋ
12	ಹಂದಿಗೊಂದಿ ಮತ್ತು ಹುಲ್ಲಾರು ಸ್ಟೇಟ್ ಫಾರೆಸ್ಟ್	ಡಿಟೋ
13	ಕಲ್ಲುಗೋಪನಹಳ್ಳಿ ಪ್ಲಾಂಟೇಷ್ಣ	ಡಿಟೋ
14	ಆಚ್ಚಲು ಸ್ಟೇಟ್ ಫಾರೆಸ್ಟ್	ಡಿಟೋ
15	ಕುಂಬಳಗೋಡು ಡಿಟೋ	ಡಿಟೋ
16	ಸಾವಂದುರ್ಗ ಸ್ಟೇಟ್ ಫಾರೆಸ್ಟ್	ಮಾಗಡಿ
17	ಉಜನಿ, ಹುಲ್ಕಡಿ ಮತ್ತು ಮಾಕಳಿ ಸ್ಟೇಟ್ ಫಾರೆಸ್ಟ್ಗಳು	ದೊಡ್ಡಬಳ್ಳಾಪುರ
18	ಬಿಳಿಗೆರೆ ಸಂದಲ್ ರಿಜರ್ವ	ನೆಲಮಂಗಲ
19	ನಿಜಗಲ್ ಫಾರೆಸ್ಟ್	ಡಿಟೋ
20	ಗೊಲ್ಲಹಳ್ಳಿ ಪ್ಲಾಂಟೇಷ್ಣ	ಹೊಸಕೋಟೆ
21	ಮಾದಪ್ಪನಹಳ್ಳಿ ಪ್ಲಾಂಟೇಷ್ಣ	ದೊಡ್ಡಬಳ್ಳಾಪುರ
22	ಗರಳಾಪುರ ಸಂದಲ್ ರಿಜರ್ವ	ಕಾನಕಾನಹಳ್ಳಿ
23	ಕೃಷ್ಣಾಪುರದ ದೊಡ್ಡಿ ರೆವಿನ್ಯೂ ಪ್ಲಾಂಟೇಷ್ಣ	ಕೊಣನೂರೆ
24	ಗಂಟಿಗಾನಹಳ್ಳಿ ಮತ್ತು ಜಕ್ಕೂರು ರೆವಿನ್ಯೂ ಪ್ಲಾಂಟೇಷ್ಣಗಳು	ಬೆಂಗಳೂರು
25	ಬಮ್ಮನಹಳ್ಳಿ ಮತ್ತು ಬೈರಕಟ್ಟಹಳ್ಳಿ ರೆವಿನ್ಯೂ ಪ್ಲಾಂಟೇಷ್ಣಗಳು	ನೆಲಮಂಗಲ

ವೈ. ಸೀತಾರಾಮಯ್ಯ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ತುಮಕೂರ ಡಿಸ್ಟ್ರಿಕ್ಟ್.

ತಾರೀಖು 6ನೇ ಜನವರಿ 1895ನೇ ಇಸವಿ.

ಸ್ರ 1890ನೇ ಇಸವಿ ಫಿಬ್ರವರಿ 15ನೇ ತಾರೀಖಿನ ಮೈಸೂರು ಗೆಜೆಟ್ 2ನೇ ಭಾಗದ 45ನೇ ಪುಟದಲ್ಲಿ ಘಾಯಿಷ್ ಮಾಡಿರುವ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ 1890ನೇ ಇಸವಿ ಜನವರಿ 28ನೇ ತಾರೀಖಿನ ನೋಟಿಫಿಕೇಷ್ಣ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ತುಮಕೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಮತ್ತು ಪ್ಲಾಂಟೇಷ್ಣಗಳನ್ನು ಪೆಂಕಿಯಿಂದ ಕಾಪಾಡತಕ್ಕ ಬಸ್ಟ್ 1895ನೇ ಇಸವಿ ಜನವರಿ ತಾರೀಖು 1ರ ಲಾಗಾಯತು ಮೇ ಆಖೈರವರಿಗೂ ಬಂದ್ ಮಾಡಲ್ಪಟ್ಟಿರುತ್ತೆ. ಅಂಬುಗಾರ್ರಿಗೂ ಶಿಕಾರಿದಾರ್ರಿಗೂ ಮತ್ತು ಕಟಿಗಾರ್ರಿಗೂ ಸಹಾ ಲೈಸೆನ್ಸು ಕೊಡಲ್ಪಡುವದಿಲ್ಲವೆ. ಫಾರೆಸ್ಟು ಅಥವ ಪ್ಲಾಂಟೇಷ್ಣಗಳಲ್ಲಿ ಅತಿಕ್ರಮಪ್ರವೇಶ ಮಾಡತಕ್ಕವರನ್ನು ಕ್ರಿಮಿನಲ್ ವಿಚಾರಣೆಗೆ ಗುರಿಮಾಡಲ್ಪಡುತ್ತೆ.

ನಂಬರ್.	ಫಾರೆಸ್ಟ್ ಯಾ ಪ್ಲಾಂಟೇಷ್ಣ ಹೆಸರು.	ತಾಲ್ಲೂಕು.
1	ದೇವರಾಯದುರ್ಗ ಫಾರೆಸ್ಟ್ ಮತ್ತು ಗೊಲ್ಲಹಳ್ಳಿ ಪ್ಲಾಂಟೇಷ್ಣ	ತುಮಕೂರು
2	ಮದ್ದಗಿರಿ ಫಾರೆಸ್ಟ್	ಮದ್ದಗಿರಿ
3	ಕೋಳಿಕಾಲ್ ಫಾರೆಸ್ಟ್	ಡಿಟೋ
4	ಹುಲಿಯೂರುದುರ್ಗ ಫಾರೆಸ್ಟ್	ಕುಣಿಗಲ್
5	ಕಂಪ್ಲಾಪುರ ಫಾರೆಸ್ಟ್	ಡಿಟೋ
6	ಕುದರೆ ಕಣಿವೆ ಫಾರೆಸ್ಟ್	ಹುಳಿಯಾರ್ ಸಬ್ ತಾಲ್ಲೂಕು
7	ಬುಕ್ಕಾಪಟ್ಟಣ ಫಾರೆಸ್ಟ್	ಶಿರಾ, ಗುಬ್ಬಿ, ಚಿಕ್ಕನಾಯಕನಹಳ್ಳಿ
8	ಮುಂಚಲ್‌ದೊರೆ ಫಾರೆಸ್ಟ್	ಗುಬ್ಬಿ
9	ದಾಸರಹಳ್ಳಿ ಪ್ಲಾಂಟೇಷ್ಣ	ತುಮಕೂರು
10	ಲಿಂಗೇನಹಳ್ಳಿ ಡಿಟೋ	ಡಿಟೋ
11	ಬಳ್ಳಾಪುರ ಡಿಟೋ	ಡಿಟೋ
12	ಮಲ್ಲಸಂದ್ರ ಡಿಟೋ	ಡಿಟೋ
13	ಗೊಲ್ಲಹಳ್ಳಿ ಡಿಟೋ	ಡಿಟೋ
14	ಅಡಗೂರು ಡಿಟೋ	ಗುಬ್ಬಿ
15	ಗಂಟಿಗಾನಹಳ್ಳಿ ಡಿಟೋ	ಕೊರ್ಟಗೆರೆ ಸಬ್ ತಾಲ್ಲೂಕು
16	ಸೂಳಿಕೆರೆ	ಡಿಟೋ

ಎಂ. ವೆಂಕಟನಾರಣಪ್ಪ, ಅಸಿಸ್ಟೆಂಟ್ ಕ್ವಾರ್ವೇಟರ್.